ಶ್ರೀ ಹಾರ್ನಳ್ಳಿ ರಾಮಸ್ವಾಮಿ :- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ನಾನು ಹೇಳಿಕಳುಹಿಸುತ್ತೇನೆ.

ಅಧ್ಯಕ್ಷರು:- ಇದು ಬಹಳ ದಿವಸಗಳಿಂದ ಉಳಿದುಕೊಂಡು ಬಂದಿದೆ. ಇದಕ್ಕೆ ಇವತ್ತು ಉತ್ತರ ಆಗಬೇಕು. ಅವರಿಗೆ ಹೇಳಿ ಕಳುಹಿಸಿ ಈ ದಿವಸ ಸಂಜೆ ಒಳಗೆ ಉತ್ತರ ಕೊಡುವುದಕ್ಕೆ ಹೇಳಿ.

(ಆ) ಕಾಲೇಜು ಶಿಕ್ಷಣ ಇಲಾಖೆಯ ಭೋದಕೇತರ ಸಿಬ್ಬಂದಿಯವರಿಂದ ಉಪವಾಸ ಸತ್ಯಾಗ್ರಹ.

ಶ್ರೀ ಆರ್ ವಿ ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಾನ್ ಟೀಚಿಂಗ್ ಸ್ಟಾಫ್ ಆಫ್ ಕೊಲಿಜಿಯೇಟ್ ಎಜ್ಯುಕೇಷನ್‌ನವರು 22.8.94ರಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬೇಡಿಕೆಗಳಲ್ಲಿ ಯಾವುದೇ ರೀತಿಯ ಫೈನಾನ್ಸಿಯಲ್ ಬರ್ಡನ್ ಇಲ್ಲ ಆದರೂ ಸಹ ಸರ್ಕಾರದ ಕಡೆಯಿಂದ ಏನೂ ಕ್ರಮವೂ ಇವತ್ತಿನದಿವಸ ಆಗಿಲ್ಲ. ಹೀಗಾಗಿ ಇವತ್ತು ಅವರು ಸತ್ಯಾಗ್ರಹದಲ್ಲಿ ಇದ್ದಾರೆ. ಮೊನ್ನೆ ಮುಖ್ಯಮಂತ್ರಿಗಳು ನಮ್ಮದು ಭರವಸೆ ಸರ್ಕಾರ ಅಲ್ಲ ಎಂದು ಹೇಳಿದರು. ಇವತ್ತು ಹಲವಾರು ಭರವಸೆ ಕೊಟ್ಟು ನಂತರ ಹಣದ ವಿಚಾರ ಹೇಳಬಹುದು. ಆದರೆ ಇದರಲ್ಲಿ ಫೈನಾನ್ಸಿಯಲ್ ಇಂಪ್ಲಿಕೇಷನ್ಸ್ ಏನೂ ಇಲ್ಲ. ಹಾಗಾಗಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈಗ ಡಿಗ್ರಿ ಕಾಲೇಜುಗಳಲ್ಲಿ ಏನು ನಾನ್ ಟೀಚಿಂಗ್ ಸ್ಟಾಫ್‌ನವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರು ಪೇಸ್ಕೇಲ್ ಮತ್ತು ಬೇರೊಂದರ ಬಗ್ಗೆ ಏನು ಕೇಳಿದ್ದಾರೆ, ಅದರ ಬಗ್ಗೆ ಫೈನಾನ್ಸಿಯಲ್ ಬರ್ಡನ್ ಸರ್ಕಾರದ ಮೇಲೆ ಬರುವುದಿಲ್ಲ. ಆದಕಾರಣ ಆ ಬೇಡಿಕೆಗಳ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಈ ವಿಚಾರದ ಬಗ್ಗೆ ಉನ್ನತ ಶಿಕ್ಷಣ ಮಂತ್ರಿಗಳನ್ನು ಕರೆಸಿ ಉತ್ತರವನ್ನು ಕೊಡಿಸಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಉನ್ನತ ಶಿಕ್ಷಣ ಮಂತ್ರಿಗಳು ಈಗ ಸದನಕ್ಕೆ ಬರುವವರಿದ್ದಾರೆ.

(ಇ) ವಿಷಯ: ಹೇಮಾವತಿ ಕಾಲುವೆಯ ಕಳಪೆ ಕಾಮಗಾರಿ ಬಗ್ಗೆ

* ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರ ಇದೆ ಹೇಮಾವತಿ ಕಾಲುವೆ ಬಗ್ಗೆ ನಾನು ಈಗ ಮಾನ್ಯ ವೈ.ಕೆ.ರಾಮಯ್ಯನವರ ಜೊತೆ ಮಾತನಾಡಿದೆ. ಅಲ್ಲಿ ಏನು 82.4 ಕಿಲೋಮೀಟರ್ ನಿಂದ 83 ನೇ ಕಿಲೋಮೀಟರ್ ವರೆಗೆ ಕೆಲಸ ನಡೆಯುತ್ತಿದೆ. ಆ ಕೆಲಸ ಬಹಳ ಕಳಪೆ ಮಟ್ಟದ್ದು ಇದೆ ಹಾಗೂ ಇಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಲೂಟಿ ಆಗುತ್ತಾ ಇದೆ ಎಂದು ಸರ್ಕಾರದ ಗಮನಕ್ಕೆ ಮಾಜಿ ಸಚಿವರಾದ ಎಸ್.ರೇವಣ್ಣ ಅವರು ತಂದರು. ಆಮೇಲೆ ಉಪ ಮುಖ್ಯಮಂತ್ರಿಗಳೂ ಆ ಕೆಲಸವನ್ನು ನಿಲ್ಲಿಸಿದರು. ಮತ್ತು ಆ ಜಾಗಕ್ಕೆ ಭೇಟಿ ಕೊಟ್ಟು ತಪಾಸಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು

ಹೇಳಿದರು. ಆದರೆ ಈಗ ಆ ತಪಾಸಣೆ ಕೆಲಸವನ್ನು ಸರ್ಕಾರ ಮಾಡದೇ ಪುನಃ ಆ ಕೆಲಸ ವನ್ನು ಮುಂದುವರಿಸಬೇಕೆಂದು ಆದೇಶ ನೀಡಿದ್ದಾರೆ. ಆ ಕೆಲಸ ನಡೆಯುತ್ತಾ ಇದೆ. ಸಬ್‌ಸ್ಟ್ಯಾಂಡರ್ಡ್ ವರ್ಕ್ ಆಗುತ್ತಿದ್ದು ಇದರಿಂದ ಸರ್ಕಾರದ ಹಣ ಲೂಟಿ ಆಗುತ್ತಾ ಇದೆ. ಇದರಿಂದ ರೈತರಿಗೂ ಯಾವುದೇ ಪ್ರಯೋಜನ ಆಗುವುದಿಲ್ಲ. ಹಾಗಾಗಿ ನಾನು ಕೇಳುವುದು ಇಷ್ಟೇ, ಈಗಾಗಲೇ You have arrested Sri S.Revanna, our Ex-Minister and he is being produced before the Court today. ಇದು ಕಳೆದ ಎಷ್ಟೋ ತಿಂಗಳುಗಳಿಂದ ನಡೆಯುತ್ತಾ ಇದೆ. ಮಾನ್ಯ ಉಪಮುಖ್ಯ ಮಂತ್ರಿಗಳೂ ಒಪ್ಪಿಕೊಂಡು ಕೆಲಸವನ್ನೂ ನಿಲ್ಲಿಸಿದ್ದರು. ಆದರೆ ತನಿಖೆ ಮಾಡದೇ ಪುನಃ ಕೆಲಸ ಪ್ರಾರಂಭ ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿ ಹಣ ನೀರಾವರಿಗೆ ಖರ್ಚು ಮಾಡುವಾಗ ಆ ಹಣ ಪೋಲಾದರೆ ಅದರ ಲಾಭ ಯಾರಿಗೆ? ಅದು ರೈತರಿಗೂ ಇಲ್ಲ, ನಾಡಿಗೂ ಇಲ್ಲ. ನಾಡಿನ ಪ್ರಗತಿಯೂ ಆಗುವುದಿಲ್ಲ. ನಾನು ಸರ್ಕಾರವನ್ನು ಕೇಳುವುದು ಇಷ್ಟೇ, ಅಲ್ಲಿಗೆ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿ ಅಲ್ಲಿನ ಕೆಲಸವನ್ನು ಪರಿಶೀಲಿಸಿ ಅಲ್ಲಿನ ಕೆಲಸ ಕಳಪೆ ಇದ್ದರೆ ಅಲ್ಲಿನ ಮುಖ್ಯ ಎಂಜಿನಿಯರ್ ಯಾರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವೇಳೆ ಅಲ್ಲಿನ ಕೆಲಸ ಚೆನ್ನಾಗಿ ಇದ್ದರೆ ಈ ಪ್ರಶ್ನೆ ಇಲ್ಲ. ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಅಲ್ಲಿ ಪರಿಶೀಲನೆ ಆಗದೇ ಕೆಲಸ ಪ್ರಾರಂಭ ಆದರೆ ನಾವು ಉಪಮುಖ್ಯಮಂತ್ರಿಗಳ ಬಗ್ಗೆ ಏನು ತಿಳಿದುಕೊಳ್ಳಬೇಕು? ಹೀಗಾಗಿ ಇದರ ಬಗ್ಗೆ ವಿಚಾರಣೆ ಆಗಬೇಕು. ಅದು ಸರಿ ಇದ್ದರೆ ಕೆಲಸ ನಡೆಯಬೇಕು. ಈಗ ಉಪ ಮುಖ್ಯಮಂತ್ರಿಗಳೇ ಇಲ್ಲಿ ಉತ್ತರ ಕೊಡಬೇಕೆಂದು ಏನೂ ಇಲ್ಲ. ಮಾನ್ಯ ರಾಮಸ್ವಾಮಿ ಅವರೇ ಉತ್ತರ ಕೊಡಬಹುದು. ಅಲ್ಲಿಗೆ ಒಬ್ಬರನ್ನು ಕಳುಹಿಸಿ ತನಿಖೆ ಮಾಡಲು ನಾನು ಹೇಳುತ್ತಿದ್ದೇನೆ. ತಾವು ಇದಕ್ಕೆ ಉತ್ತರ ಕೊಡಬಹುದು.

ಶ್ರೀವೈ.ಕೆ.ರಾಮಯ್ಯ : -(ಕುಣಿಗಲ್) ಮಾನ್ಯ ಅಧ್ಯಕ್ಷರೇ, ಹೇಮಾವತಿ ಅಣಿಕಟ್ಟಿನಲ್ಲಿ 20 ವರ್ಷಗಳಿಂದ ಸುಮಾರು 6 ಲಕ್ಷ ಎಕರೆಗಳಿಗೆ ಆಗುವಷ್ಟು ನೀರು ತುಂಬಿದೆ. ಏರಿ ಆಗಿದೆ. ತೂಬು ಆಗಿದೆ, ಕೋಡಿ ಆಗಿದೆ, ನೀರೂ ಇದೆ. ಹಾಗೇ 6 ಲಕ್ಷ ಏಕರೆಗಳಿಗೆ ಆಗುವಷ್ಟು ನೀರು ಕಾವೇರಿ ನದಿಯ ಕೆಳಗಡೆ ಇಳಿದು ಹೋಗುತ್ತಿದೆ. 20 ವರ್ಷಗಳಿಂದ ಆ ನೀರನ್ನು ಭೂಮಿಗೆ ಬಿಟ್ಟುಕೊಳ್ಳುವುದಕ್ಕೆ ಆಗದ ಪರಿಸ್ಥಿತಿಯನ್ನು ನಾವು ನೋಡಿಕೊಂಡು ಬಂದಿದ್ದೇವೆ. ಎಲ್ಲಾ ಸಮಸ್ಯೆಗಳನ್ನು ಬಿಡಿಸಿ ತುಮಕೂರು ಬಳಿಗೆ ನೀರನ್ನು ತರುವಂತಹ ಸಮಯದಲ್ಲಿ ಈ ಒಂದು ಪರಿಸ್ಥಿತಿ ಸೃಷ್ಟಿಯಾಗಿದೆ. ಅದನ್ನು ಯಾರೋ ಸೃಷ್ಟಿ ಮಾಡಿದ್ದಾರೆ. ಯಾರು ಸೃಷ್ಟಿ ಮಾಡಿದ್ದಾರೆಂಬುದು ನನಗೆ ಗೊತ್ತಿದ್ದರೂ ಈ ಸದನದಲ್ಲಿ ಆ ಹೆಸರು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಪ್ರಶ್ನೆ ಇಷ್ಟೇ ಯಾವ ಕಾಲದಲ್ಲಿ ನಾವು ರಾಜಕೀಯಕ್ಕೆ ಬಂದ ಮೇಲೆ ಯಾವ ಕೆಲಸದಲ್ಲಿ ಹಣ ದುರುಪಯೋಗ ಆಗಿಲ್ಲವೆಂದು ದಯಮಾಡಿ ಸರ್ಕಾರದವರು ಹೇಳಬೇಕು. ಎಲ್ಲಾದರಲ್ಲೂ ಆಗಿದೆ. It is only a difference of degree. ನಾನು ಮಂತ್ರಿ ಆಗಿದ್ದಾಗಲೂ ಆಗಿತ್ತು. ರಂಗನಾಥ್ ಅವರು ಮಂತ್ರಿ ಆದಾಗಲೂ ಆಗುತ್ತಾ ಇದೆ, ನೀವು ಬಂದರೂ ಆಗುತ್ತದೆ, ದೇಶಪಾಂಡೆಯವರು ಬಂದರೆ ಆಗಲೂ ಆಗುತ್ತದೆ. It is

only a question of degree. ಅಪವ್ಯಯಕ್ಕೆ ಕಾರಣನಾದ ವ್ಯಕ್ತಿಯನ್ನು ಕರೆದುಕೊಂಡು ಬಂದು ಈ ದೇಶದಲ್ಲಿ ನೇಣು ಎತ್ತಿದರೆ ಹಾಗೂ ಇಂತಹ ಶಿಕ್ಷೆ ಕೊಡಲು ಪ್ರಯತ್ನ ಪಡುವ ಪುಣ್ಯಾತ್ಮನ ಕಾಲಿಗೆ ನಮಸ್ಕಾರವನ್ನು ನಾನು ಮೊದಲು ಮಾಡುತ್ತೇನೆ. ಆದರೆ ಯಾವುದೇ ಕಾರಣಕ್ಕೆ ಈ ಕುಂಟು ನೆಪಗಳನ್ನು ಒಡ್ಡಿ ಕೆಲಸ ನಿಲ್ಲಿಸುವ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬಾರದು. ನೀವು ತನಿಖೆ ಮಾಡಿ, ನೇಣು ಹಾಕಿ, ನಮಗೆ ಬೇಸರ ಇಲ್ಲ. ಆದ್ದರಿಂದ ನಾನು ಇದ್ದರಲ್ಲಿ ವೈಯಕ್ತಿಕವಾಗಿ ಸಂಪೂರ್ಣವಾಗಿ ಇನ್ವಾಲ್ವ್ ಆಗಿರುವುದರಿಂದ ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಯಾವುದೇ ಕಾರಣಕ್ಕೆ ನೀವು ಏನಾದರೂ ಅಲ್ಲಿ ಕೆಲಸ ನಿಲ್ಲಿಸಿದರೆ ನಾನು ಬಂದು ಮುಷ್ಕರ ಕೂಡಬೇಕಾಗುತ್ತದೆ. ಅಧ್ಯಕ್ಷರೇ, ಒಂದು ಗಾದೆ ಇದೆ. The man may find a different level at different places in different situation but water will find its own place always. ಅದು ಗಾದೆ ಮಾತು. ಆದ್ದರಿಂದ ನಾನು ಹೇಳಿದ ಕಡೆಗೆ ಅಥವಾ ರೇವಣ್ಣನವರು ಹೇಳಿದ ಕಡೆಗೆ ನೀರು ಹರಿದುಬರುವುದಿಲ್ಲ. It finds its own place and it will flow only where there is a level. ಆದ್ದರಿಂದ ರೇವಣ್ಣನವರು ಮುಷ್ಕರ ಮಾಡಿದ ತಕ್ಷಣ ಶಿವಗಂಗೆ ಬೆಟ್ಟದ ಮೇಲೆ ಹಾಯಿಸಿ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಅಥವಾ ರಾಮಯ್ಯ ಮುಷ್ಕರ ಮಾಡಿದ ತಕ್ಷಣ ಹೇಮಗಿರಿ ಬೆಟ್ಟದ ಮೇಲೆ ತರುವುದಕ್ಕೆ ಆಗುವುದಿಲ್ಲ. ಇದು 10 ವರ್ಷಗಳಿಂದ ನಡೆಯುತ್ತಿದೆ. ಮಾನ್ಯ ರಾಮಸ್ವಾಮಿಯವರು ಇದಕ್ಕೆ ಉತ್ತರ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ನಾವು ನಿಮ್ಮ ಕೈಯಲ್ಲಿ ಸಿಕ್ಕಿ 10 ವರ್ಷ ಸತ್ತಿದ್ದೇವೆ. 10 ವರ್ಷಗಳ ಹಿಂದೆಯೇ ತುಮಕೂರು ಜಿಲ್ಲೆಗೆ ನೀರು ಬರಬೇಕಾಗಿತ್ತು. ಈಗ ಈ ಕುಂಟು ನೆಪವೊಡ್ಡಿ ಮತ್ತೆ ತಾವು ನಮಗೆ ಅಡ್ಡಿಪಡಿಸಬೇಡಿ. ದಯಮಾಡಿ ಕೆಲಸವನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡಿ. ಹಿರಿಯರಾದ ರೇವಣ್ಣನವರು ಏನು ಈ ರಾಷ್ಟ್ರದಲ್ಲಿ ನಡೆಯುವ ಅಪವ್ಯಯದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಹೋರಾಡುತ್ತಾರೋ, ಅವರ ಜೊತೆಯಲ್ಲಿ ನಾನೂ ಸೇರುತ್ತೇನೆ. ಅದಕ್ಕೆ ನಾನೇನೂ ವಿರೋಧ ಮಾಡುವುದಿಲ್ಲ. ಆದರೆ ಕೆಲಸ ನಿಲ್ಲಿಸಲು ಇಂತಹ ಕುಂಟುನೆಪ ಮಾಡಿದರೆ ಸರ್ಕಾರವನ್ನು ನಾನು ವಿರೋಧಿಸ ಬೇಕಾಗುತ್ತದೆ. ನಾನು ಒಂದು ಪ್ರಾರ್ಥನೆ ಮಾಡುತ್ತೇನೆ. ಹೇಮಾವತಿ ಒಂದೇ ಅಲ್ಲ, ಈ ರಾಜ್ಯದಲ್ಲಿ ನಡೆಯುತ್ತಿರತಕ್ಕ ಎಲ್ಲಾ ರೀತಿಯ ಅಪವ್ಯಯದ ಬಗ್ಗೆ ವಿಚಾರಣೆ ನಡೆಯಲಿ. ಈ ಅಪವ್ಯಯ ಮಾಡುತ್ತಿರತಕ್ಕ ವ್ಯಕ್ತಿಯನ್ನು ನೇಣುಗಂಬಕ್ಕೆ ಹಾಕಲಿ. ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ ಅಲ್ಲಿ ರತ್ನನಾಯಕ್ ಎಂದು ಹೇಳಿ ಮುಖ್ಯ ಎಂಜಿನಿಯರ್ ಕೆಲಸ ಮಾಡುತ್ತಿದ್ದಾರೆ. ನನಗೆ ಅವರು ಯಾವ ವಿಧದಲ್ಲೂ ಸಂಬಂಧಪಟ್ಟವರಲ್ಲ. ಆದರೂ ನಾನು ಅವರನ್ನು ಅಭಿನಂದಿಸುತ್ತೇನೆ. ಆ ರತ್ನನಾಯಕ್ ಎನ್ನುವ ಎಂಜಿನಿಯರ್ ಇಲ್ಲದೇ ಇದ್ದಿದ್ದರೆ ತುಮಕೂರು ಜಿಲ್ಲೆಗೆ ನಾವು ನೀರನ್ನು ಕಾಣುವುದಕ್ಕೆ ಆಗುತ್ತಿರಲಿಲ್ಲ. ಆತ ಒಳ್ಳೆಯವನೋ, ಭ್ರಷ್ಟನೋ, ಕೆಟ್ಟವನೋ ಎಂದು ನನಗೆ ಗೊತ್ತಿಲ್ಲ. ಕೆಲಸ ಮಾಡಿದ್ದಾರೆ. ಅವರ ಬಗ್ಗೆ ಯಾರು ಏನು ಬೇಕಾದರೂ

ಮಾತನಾಡಿ ಕೊಂಡು ಹೋಗಲಿ. ಇದೇ ರತ್ನಾನಾಯಕ್ ಅಲ್ಲಿ ಮುಂದೆಯೂ ಎಂಜಿನಿಯರ್ ಆಗಿ ಮುಂದುವರಿಯಬೇಕು. ಕೆಲಸ ಸಹ ಮುಂದುವರಿಯಬೇಕು. ಇದನ್ನೇ ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳತಕ್ಕುದು. ಈಗ ಮಾನ್ಯ ರಾಮಸ್ವಾಮಿಯವರು ತನಿಖೆ ಆಗುವವರೆಗೆ ಕೆಲಸ ನಿಲ್ಲಿಸುತ್ತೇವೆ ಎಂದು ಹೇಳಿದರೆ ನಾನು ಇಲ್ಲೇ ಬಂದು ಕೂರುತ್ತೇನೆ. ಇವತ್ತು ಹೊರಗಡೆಗೆ ಬೇಕಾಗಿಲ್ಲ. ಇಲ್ಲೇ ಕೂರುತ್ತೇನೆ. ಆದುದರಿಂದ ಕೆಲಸವನ್ನು ನಡೆಸತಕ್ಕ ವಾಗ್ದಾನವನ್ನು ನನಗೆ ಕೊಡಬೇಕು. ಉಳಿದಿರುವ ವಿಚಾರಗಳ ಬಗ್ಗೆ ನನಗೆ ಆಸಕ್ತಿ ಇಲ್ಲ.

* ಶ್ರೀ ಜೆ.ಸಿ.ಮಧುಸ್ವಾಮಿ :- (ಚಿಕ್ಕ ನಾಯಕನ ಹಳ್ಳಿ) :- ಮಾನ್ಯ ಅಧ್ಯಕ್ಷರೇ , ತುಮಕೂರು ಜಿಲ್ಲೆಗೆ ನೀರು ಹರಿಸಬೇಕೆಂದು ಹೇಳಿ ತುಮಕೂರು ಜಿಲ್ಲೆಯ ಎಲ್ಲಾ ಶಾಸಕರಾಗಿಯಾಗಿ ರೇವಣ್ಣನವರಿಗೂ ಸಹಾ ಭಾರಿ ಕಳಕಳಿ ಇದೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ಸನ್ಮಾನ್ಯ ಕಾನೂನು ಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮೊದಲು ಅಲೈನ್‌ಮೆಂಟ್‌ನ್ನು ಎಷ್ಟು ಸಾರಿ ಬದಲಾವಣೆ ಮಾಡಿದ್ದಾರೆ, ಏಕೆ ಬದಲಾವಣೆ ಮಾಡಿದ್ದಾರೆ ಎಂಬುದನ್ನು ಹೇಳಬೇಕು. ರೇವಣ್ಣನವರು ಕೇಳಿದರೆ ಒಂದು ಕಡೆ ಅಲೈನ್‌ಮೆಂಟ್, ಇನ್ನೊಬ್ಬರು ಕೇಳಿದರೆ ಇನ್ನೊಂದು ಕಡೆ ಅಲೈನ್‌ಮೆಂಟ್ ಹೀಗೆ ತುಮಕೂರು ಜಿಲ್ಲೆಯಲ್ಲಿ ಏಕೆ ಆಗಿದೆ ಎಂಬುದನ್ನು ಹೇಳಬೇಕು. ಇದನ್ನು ರೇವಣ್ಣನವರು ಒಬ್ಬರೇ ಮಾಡಲಿಲ್ಲ. ನಮ್ಮ ವೈ.ಕೆ.ರಾಮಯ್ಯನವರ ಕ್ಷೇತ್ರದಲ್ಲೂ ಸಹ ಅಲೈನ್‌ಮೆಂಟ್ ಬದಲಾವಣೆ ಆಗಿದೆ ಎಂದು ಹೇಳಿ ಎರಡು, ಮೂರು ಸಲ ಧರಣಿಗಳು ಆಗಿವೆ. ಯಾರ ತೆವಲಿಗೆ ಈ ಅಲೈನ್‌ಮೆಂಟ್‌ಗಳು ಛೇಂಜ್ ಆಗುತ್ತಿವೆ.

10.00 ಎ.ಎಂ

ಯಾವ ಇಂಜಿನಿಯರುಗಳು ಕುಳಿತುಕೊಂಡು ಅಲೈನ್‌ಮೆಂಟ್‌ಗಳನ್ನು ಛೇಂಜ್ ಮಾಡುತ್ತಿರುವುದು? ನಾಲೆ ಒಂದು ಸಲ ಇಲ್ಲಿ ಹೋಗಬೇಕು ಎಂದು ಹೇಳುತ್ತಾರೆ. ನಂತರ ಅಲ್ಲಿ ಅಲ್ಲ. ಇಲ್ಲಿ ಹೋಗಬೇಕೆಂದು ಯಾರು ಬದಲಾವಣೆ ಮಾಡುತ್ತಾರೆ ಎಂಬುದನ್ನು ನೀವು ತನಿಖೆ ಮಾಡಬೇಕು. ಎರಡನೆಯದಾಗಿ ಇಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ನಡೆದಿದೆ. ಬೇಕುಬೇಕಾದ ಹಾಗೆ ಇಲ್ಲಿ ಕೆಲಸಗಳು ನಡೆಯುತ್ತಾ ಇವೆ. ಯಾರು ಕೇಳುವವರಿಲ್ಲವೇ ಎಂದು ಕೇಳುವಂಥ ಅಧಿಕಾರ ಸನ್ಮಾನ್ಯ ರೇವಣ್ಣ ಅವರಿಗೂ ಇದೆ. ನಮಗೂ ಇದೆ. ನಾವೆಲ್ಲರೂ ಹೇಮಾವತಿ ನಾಲಾ ವಲಯದಿಂದ ಬರುವವರು ದಯಮಾಡಿ. ತಾವು ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿದೆ. ರೇವಣ್ಣ ಅವರ ಹೋರಾಟ ಏನೂ ನೀರು ನಿಲ್ಲಿಸಬೇಕು ಎಂದು ಇಲ್ಲ. ನಮಗೆಲ್ಲರಿಗೂ ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ತರಬೇಕು ಎಂದು ಕಾಳಜಿ ಇದೆ ತಕ್ಷಣ ಇರಿಗೇಷನ್ ಮತ್ತು ತುಮಕೂರು ನಗರಕ್ಕೆ ಕುಡಿಯುವ ನೀರುತರಬೇಕು ಎಂದು ಕಾಳಜಿ ಇದೆ. ಅಸ್ಪೀಡ್‌ನಲ್ಲಿ ಏನು ಬೇಕಾದರೂ ಮಾಡಿಕೊಂಡು ಹೋಗಬಹುದು ಎಂದು ಅವರು ಭಾವಿಸಿದರೆ, ತಾವು ಅದನ್ನು ತಡೆ ಮಾಡಬೇಕಾಗುತ್ತದೆ. ಹಾಗೂ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ನಾಲೆ ಎಲ್ಲಿ ಹೋಗುತ್ತದೆ ಎಂದು ನೀವು ಗುರುತಿಸಿದಿರಿ, ಅಲ್ಲಿ ಹೋಗುತ್ತಿದೆಯೋ ಅಥವಾ ಬೇರೆ ಕಡೆಗೆ ಹೋಗುತ್ತಿದೆಯೋ ಎಂದು ಹೇಳುವ ಸೌಜನ್ಯವನ್ನು

ಸರ್ಕಾರ ನಮಗೆ ತೋರಿಸಬೇಕಾಗುತ್ತದೆ. ದಯವಿಟ್ಟು ಈ ಕಡೆಗೆ ತಾವು ಗಮನಹರಿಸಬೇಕೆಂದು ನಾನು ಕೂಡ ಪ್ರಾರ್ಥಿಸುತ್ತೇನೆ.

ಡಾ : ಎನ್.ಬಿ.ನಂಜಪ್ಪ (ಶ್ರವಣಬೆಳಗೊಳ) :- ಮಾನ್ಯ. ಅಧ್ಯಕ್ಷರೇ, ಹೇಮಾವತಿ ನಾಲೆ ವಿಚಾರವಾಗಿ ಮಾನ್ಯ ವೈ.ಕೆ. ರಾಮಯ್ಯ ಮತ್ತು ಇತರರು ಮಾತನಾಡುತ್ತಾ ಇದ್ದರು. ತುಮಕೂರು ಜಿಲ್ಲೆಗೆ ನೀರು ಬರಬೇಕೆಂದು ತ್ವರಿತಗತಿಯಲ್ಲಿ ಕಾರ್ಯ ಆಗುತ್ತಾ ಇದೆ. ಹೇಮಾವತಿಯಿಂದ ನೀರು ಬಿಡಬೇಕೆಂದು ಈಗಾಗಲೇ ಮುಖ್ಯಮಂತ್ರಿಗಳ ಪ್ರೋಗ್ರಾಂ ಕೂಡ ಇದೆ. ಅದೇ ಕಾಲದಲ್ಲಿ ಈ ಅಲೈನ್‌ಮೆಂಟ್ ಬಗ್ಗೆ ಮಾತನಾಡುತ್ತಿದ್ದರಲ್ಲಾ, ನಮಗೆ 'ಓ' ಅಲೈನ್ 'ವೈ' ಅಲೈನ್‌ಮೆಂಟಗೆ ಚೇಂಜ್ ಮಾಡಿ 14 ಸಾವಿರ ತೆಂಗಿನಗಿಡಗಳನ್ನು ಸರ್ವನಾಶ ಮಾಡಿ, ನೀರನ್ನು ಏನು ತೆಗೆದುಕೊಂಡಾಗಿದೆ, ಅಲ್ಲಿ ಲಿಫ್ಟ್ ಇರಿಗೇಷನ್ ಮಾಡುತ್ತೇವೆ ಅಂತ ಹೇಳಿ, ಅದು ಸರಿಯಾಗಿ ನಡೆಯದೆ ಕುಂಠಿತವಾಗಿದೆ. ಆ ಎರಡು ಲಿಫ್ಟ್ ಇರಿಗೇಷನ್‌ನಲ್ಲಿ ನೊಂದಿರತಕ್ಕಂಥ ರೈತರಿಗೆ ಬಹಳ ಬೇಗನೇ ಆ ಕೆಲಸವನ್ನು ಮಾಡಿಮುಗಿಸದೇ ಹೋದರೆ, ಆ ನೀರು ತುಮಕೂರಿಗೂ ಬರುವುದಕ್ಕೆ ಸಾಧ್ಯವಿಲ್ಲ, ತುರುವೆಕೆರೆಗೂ ಕೂಡ ಹೋಗುವುದಕ್ಕೆ ಸಾಧ್ಯವಿಲ್ಲ. ನಾವು ಅದನ್ನು ಪ್ರತಿಭಟಿಸುತ್ತೇವೆ. ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ಈಗಾಗಲೇ ನೊಂದಿರತಕ್ಕಂಥ ರೈತರು ನೀರು ಬಿಡುವ ದಿವಸವೇ, ಧರಣಿ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಿ ನೊಂದಿರತಕ್ಕಂಥ ರೈತರಿಗೆ, ಸಂಕಷ್ಟದಿಂದ ಅವರನ್ನು ಹೊರಗೆ ತರುವ ಕೆಲಸ ಆಗಬೇಕೆಂದು ಹೇಳಿ, ನಿಮ್ಮ ಮೂಲಕ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಹೇಳಿರತಕ್ಕಂಥ ವಿಚಾರವನ್ನು ನೀರಾವರಿ ಇಲಾಖೆಯ ಮಂತ್ರಿಗಳ ಗಮನಕ್ಕೆ ನಾನು ತರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :- ಅಲ್ಲಿ ಸಬ್‌ಸ್ಟ್ಯಾಂಡರ್ಡ್ ವರ್ಕ್ಸ್ ನಡೆಯುತ್ತಾ ಇವೆ. ಇದರ ಬಗ್ಗೆ ತನಿಖೆ ನಡೆಯಬೇಕೆಂದು ನಾವು ಹೇಳುತ್ತಿದ್ದೇವೆ. ತನಿಖೆ ನಡೆಸುವುದಕ್ಕೆ ಅವರು ಯಾಕೆ ಬೇಕು ತಾವೇ ನಡೆಸಬಹುದಲ್ಲಾ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ನಾನು ಹೇಳುವ ಹಾಗಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ :- ಯಾಕೆ? ಏನು ತೊಂದರೆ ಇದೆ? ಮಾನ್ಯ ರಾಮಯ್ಯ ಮತ್ತಿತರರು ಸಬ್‌ಸ್ಟ್ಯಾಂಡರ್ಡ್ ವರ್ಕ್ಸ್ ಬಗ್ಗೆ ತನಿಖೆ ಮಾಡಬಾರದು ಎಂದು ಹೇಳುತ್ತಿಲ್ಲ. ಇದರ ಬಗ್ಗೆ ನಾವೆಲ್ಲರೂ ಒಂದಾಗಿದ್ದೇವೆ. ತನಿಖೆ ಮಾಡಬೇಕು ಎಂದು ನಾವು ನಿಮಗೆ ಹೇಳುತ್ತಿದ್ದೇವೆ. ಅವರನ್ನು ಗಲ್ಲಿಗೆ ಹಾಕಬೇಕೆಂದು ನಾವು ಹೇಳುತ್ತಿಲ್ಲ. ಅದನ್ನು ನೀವೇ ಹೇಳಬಹುದಲ್ಲಾ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ತಾವು ಹೇಳಿರುವ ಅಂಶ, ಪ್ರಥಮ ನೋಟಕ್ಕೆ ಸ್ವಲ್ಪ ನಿಜವಿದೆ ಎಂದು ಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ಬಂದರೆ, ವಿಚಾರಣೆ ಮಾಡಿಯೇ ಮಾಡುತ್ತಾರೆ. ಮಾನ್ಯ ರಾಮಯ್ಯನವರು ಏನು ಕೆಲಸ ನಿಲ್ಲಿಸಬಾರದು ಎಂದು ಹೇಳುತ್ತಿದ್ದಾರೆ, ಅದು ಯೋಗ್ಯವಾದಂಥ ಮಾತೇ. ಆದರೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದರೆ, ನೀರಾವರಿ ಮಂತ್ರಿಗಳೇ ಮಾಡಬೇಕು, ಆದ್ದರಿಂದ ಇದನ್ನು ನಾನು ಅವರ ಗಮನಕ್ಕೆ ತರುತ್ತೇನೆ.

ವಿಷಯ : ಚಿಂತಾಮಣಿಯ ಸೋಮಕನ ಹಳ್ಳಿಯಲ್ಲಿ ನಡೆದ ಘಟನೆ

ಶ್ರೀ ಸಿ. ಭೈರೇಗೌಡ (ಮೇಮಗಲ್):- ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ಚಿಂತಾಮಣಿಯ ಸೋಮಕನಹಳ್ಳಿಯಲ್ಲಿ ನಡೆದ ಘಟನೆ ಬಗ್ಗೆ ಇಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ ಮಾನ್ಯ ಗೃಹಸಚಿವರು ನನ್ನನ್ನು ಕುರಿತು ಕೆಲವು ಮಾತುಗಳನ್ನು ಆಡಿದ್ದಾರೆ. ತಕ್ಷಣ ಅದಕ್ಕೆ ನಾನೂ ಸಹ ಪ್ರತಿಭಟನೆಯನ್ನು ಸೂಚಿಸಿದ್ದೇನೆ. ಮತ್ತೆ ನಮ್ಮ ಸ್ನೇಹಿತರಾದ ಶ್ರೀ ಏಕಾಂತಯ್ಯನವರೂ ಸಹ ಈ ವಿಧಿಬಿಂದುವನ್ನು ಎತ್ತಿ ಆ ರೀತಿ ಮಾನ್ಯ ಗೃಹಸಚಿವರು ನನ್ನಮೇಲೆ ಆಪಾದನೆ ಮಾಡಬೇಕಾಗಿದ್ದರೆ ಮೊದಲೇ ಅದಕ್ಕೆ ಸೂಚನೆಯನ್ನು ಕೊಡಬೇಕು, ತಮ್ಮ ಒಪ್ಪಿಗೆಯನ್ನು ಪಡೆಯ ಬೇಕು, ಅವರು ಏನು ಆರೋಪ ಮಾಡುತ್ತಾರೆ, ಅದರ ಪ್ರತಿಯನ್ನು ನನಗೆ ಕೊಡಬೇಕು ಎಂದು ವಿಧಿವಿಧಾನದಲ್ಲಿರತಕ್ಕಂಥ ಅಂಶವನ್ನು ತಮ್ಮ ಗಮನಕ್ಕೆ ಅವರು ತಂದರು. ತಾವು ಆಗ ಕಡತವನ್ನು ನೋಡಿ, ಅದನ್ನು ತೆಗೆದುಹಾಕುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಇವತ್ತು ಏನಾಗಿದೆ ಎಂದರೆ ಪತ್ರಿಕೆಯಲ್ಲಿ ಈ ವಿಚಾರ ಅಚ್ಚಾಗಿದೆ. ಎರಡು ಪತ್ರಿಕೆಗಳನ್ನು ನಾನು ನೋಡುವುದಕ್ಕೆ ಸಾಧ್ಯವಾಯಿತು. ಉಳಿದ ಯಾವ ಪತ್ರಿಕೆಗಳಲ್ಲಿ ಅದು ಬಂದಿದೆಯೋ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳತಕ್ಕುದ್ದು ಏನೆಂದರೆ ಇದು ನಾಲ್ಕನೆಯ ಸಲ ಈ ಸಭೆಯಲ್ಲಿ ಕುಳಿತುಕೊಳ್ಳತಕ್ಕಂಥ ಅವಕಾಶವನ್ನು ನನ್ನ ಕ್ಷೇತ್ರದ ಜನರು ನನಗೆ ಕಲ್ಪಿಸಿಕೊಟ್ಟಿದ್ದಾರೆ. ಈ ನಾಲ್ಕು ಬಾರಿಯ ಅವಧಿಯಲ್ಲಿ ಒಂದು ಸಣ್ಣ ತಪ್ಪನ್ನೂ ಕೂಡ ಮಾಡುವುದಕ್ಕೆ ಇವತ್ತಿನವರೆಗೆ ಕೂಡ ನಾನು ಪ್ರಯತ್ನ ಮಾಡಿಲ್ಲ. ಅದನ್ನು ಎಲ್ಲಿ ಬೇಕಾದರೂ ನಾನು ಎದೆತಟ್ಟಿ ಧೈರ್ಯವಾಗಿ ಹೇಳಬಲ್ಲೆ. ನನ್ನ ಈ ನಾಲ್ಕು ವರ್ಷಗಳ ಅವಧಿ ಏನಿದೆ, ಇದು ನಮ್ಮ ಜನರಿಗೆ, ರಾಜ್ಯದ ಜನತೆಗೆ, ದೇಶದ ಜನತೆಗೆ ಗೊತ್ತಿದೆ. ಇಂತಹ ಪರಿಸ್ಥಿತಿ ಇರುವಾಗ ಇವತ್ತು ನನ್ನ ಮೇಲೆ ವೃಥಾ ಆರೋಪವನ್ನು ಮಾನ್ಯ ಗೃಹಮಂತ್ರಿಗಳು ಹೊರಿಸಿದ್ದಾರೆ. ಇದರ ಎಲ್ಲಾ ದಾಖಲೆಗಳು ಸರ್ಕಾರದ ಕೈಯಲ್ಲಿದ್ದಾವೆ...

ಶ್ರೀ ಚೌಡರೆಡ್ಡಿ (ಗೃಹಸಚಿವರು) :-ನಾನು ಆರೋಪ ಮಾಡಿರುವುದು ಸತ್ಯ ಎಂದು ಹೇಳಿ ಎಲ್ಲಿಬೇಕಾದರೂ ನಿರೂಪಣೆ ಮಾಡುವುದಕ್ಕೆ ರೆಡಿ ಇದ್ದೇನೆ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೇ, ಇವರು ನನ್ನಮೇಲೆ ಹೊರಿಸಿರುವ ಆರೋಪ ಏನಿದೆ, ಅದು ಸತ್ಯ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಇದನ್ನು I am challenging this. He must prove it. He is not an ordinary man.